# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ



# ಅರಸನಾದ ದಾವೀದನು (ಭಾಗ 2)


ಬರಹಗಾರರು: Edward Hughes
ಚಿತ್ರಲೇಖಕರು: Lazarus
ಪದ್ಮಾ ಸೈಲೇಸ್: Vinay Shirol
ಅಳವಡಿಸುವವರು: Ruth Klassen



60ರ 21ನೇ ಕಥೆ

**www.M1914.org**

***Bible for Children,*** *PO Box 3, Winnipeg, MB R3C 2G1 Canada*



ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು.
ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.


ಕನ್ನಡ

Kannada

ದಾವೀದನು ಯಹೂದದ ಆರಸನಾಗಿ ದಕ್ಷಿಣ ಭಾಗದಲ್ಲಿರುವ ಇಸ್ರಾಯೇಲ್ಯರನ್ನು ಆಳುವವನಾದನು, ಇನ್ನೂಳಿದ ಇಸ್ರಾಯೇಲ್ಯರನ್ನು ಸೌಲನ ಮಗನಾದ ಈಷ್ಟೋಶೆತನೂ 7 ವರ್ಷಗಳಕಾಲ ಅವರನ್ನು ಆಳಿದನು ಆದರೆ ದಾವೀದನು ದಿನದಿಂದ ದಿನಕ್ಕೆ ಬಲಶಾಲಿಯಾದನು.



1

ಕೊನೆಗೆ ಈಷ್ಟೋಶೆತನೂ ತನ್ನ ಎರಡು ಸೈನಿಕರಿಂದ ಕೊಲ್ಲಲ್ಪಟ್ಟನು.



2

ಇಸ್ರೆಯೇಲಿನ ಎಲ್ಲಾ ಕುಲದವರು ಬಂದು ದಾವೀದನನ್ನು ಇಸ್ರಾಯೇಲ್ಯರ ಅರಸನನ್ನಾಗಿ ಅಭಿಷೇಕ ಮಾಡಿದರು ಆತನು ಆ ದೇಶದ ರಾಜನಾದನು.



3

ದಾವೀದನು ಮೊದಲನೆಯದಾಗಿ ಯೆರುಸಲೇಮ್‌ನ್ನು ಸ್ವಾದಿನ ಮಾಡಿಕೊಂಡನು. ಆದು ದಾವೀದ ನಗರವಾಗಿ ಗುರುತಿಸಲ್ಪಟ್ಟಿತು.



4

ಅದು ವೈರಿಗಳನ್ನು ಎದುರಿಸುವುದಕ್ಕೆ ಬಲವಾದ ಪಟ್ಟಣವಾಗಿ ಮಾರ್ಪಟ್ಟಿತ್ತು. ಯೆರುಸಲೇಮ್‌ನಿಂದ ಹೊರಟ ದಾವೀದನ ಸೈನ್ಯವು ಪಿಲಿಷ್ಟಿಯರನ್ನು ಮತ್ತು ಇನ್ನೂ ಉಳಿದ ಇಸ್ರೆಯೇಲರ ವೈರಿಗಳನ್ನು ಜಯಿಸಿತು.



5

ನಂತರ ದಾವೀದನು ದೇವರ ಮಂಜೂಷವನ್ನು ಯೇರುಸಲೇಮ್‌ಗೆ ತಂದನು. ಅದರಲ್ಲಿ ದೇವರ **10** ಆಜ್ಞೆಗಳು ಮತ್ತು ಮೊಶೆಯ ಮೂಲಕವಾಗಿ ಕೊಡಲ್ಪಟ್ಟರಿವ ಇನ್ನೂ ಕೆಲವು ಆಜ್ಞೆಗಳು ಅದರಲ್ಲಿದ್ದವು. ಅದು ಮಾಹಾ ಪರಿಶುದ್ದವಾದದ್ದು ಅದಕ್ಕೆ ಎಲ್ಲಾ ಇಸ್ರೆಯೇಲರು ವಿದೇಯರಾಗಬೇಕು.



6

ಈ ದಾವೀದನು ಬುದ್ದಿವಂತನು ಮತ್ತು ತನ್ನನ್ನು ತಗ್ಗಿಸಿ ಕೊಳ್ಳುವವನು ಹಾಗೂ ದೇವರಿಗೆ ಯಾವಾಗಲೂ ಪ್ರಾರ್ಥನೆಯನ್ನು ಮಾಡುವಂತವನಾಗಿದ್ದನು. ಇವನ ಆಡಳಿತದದ ಪ್ರಾರಂಭ ವರ್ಷಗಳಲ್ಲಿ ಆನೇಕ ಯೊದ್ದಗಳನ್ನು ಮಾಡಿದನು.



7

ದಾವೀದನು ಒಂದು ಉತ್ತಮವಾದ ಅರಮನೆಯಲ್ಲಿ ವಾಸಿಸುತ್ತಿದ್ದನು. ಆದರೆ ದೇವರ ಮಂಜೂಷವು ಗುಡಾರದಲ್ಲಿತ್ತು. ಅದುದ್ದರಿಂದ ಪ್ರವಾದಿಯಾದ ನಾತನಾನ ಮಾರ್ಗದರ್ಶನದಿಂದ ದೇವರ ಆಲಯವನ್ನು ಕಟ್ಟಲು ತಿರ್ಮಾನಿಸಿದನು.



8


ದೇವರು ರಾತ್ರಿಯಲ್ಲಿ ದಾವೀದನಿಗೆ ಸಂದೇಶವನ್ನು ಕೊಟ್ಟು ಹೇಳಿದ್ದೇನೆಂದರೆ. ನಾನು ನಿನಗೋಸ್ಕರ ಒಂದು ಮನೆಯನ್ನು ಕಟ್ಟುವೆನೆಂದು ಮಾತುಕೊಡುತ್ತನೆ.
9


ನಿನ್ನ ಆಯುಷ್ಕಾಲವು ಮುಗಿದು ನೀನು ಪಿತೃಗಳ ಬಳಿಗೆ ಸೇರಿದ ಮೇಲೆ ನಿನ್ನಿಂದ ಹುಟ್ಟುವವನನ್ನು ನೆಲೆಗೊಳಿಸಿ ಅವನ ರಾಜ್ಯವನ್ನು ಸ್ಥಿರಪಡಿಸುವೆನು ಅವನು ನನ್ನ ಹೆಸರಿಗಾಗಿ ಒಂದು ಮನೆಯನ್ನು ಕಟ್ಟುವನು.
10


ದಾವೀದನು ಸೌಲನ ಕುಟುಂಬಕ್ಕೆ ಸಹಾಯ ಮಾಡಲು ಬಯಸವ ಸಮಯದಲ್ಲಿ ಕುಂಟನಾದ ಯೋನಾತನನ ಮಗನಾದ ಮೆಷೀಬೋಶೆತನು ಕಂಡು ಈತನು ಯಾವಾಗಲೂ ರಾಜ ಪಂಕ್ತಿಯಲ್ಲಿ ಊಟಮಾಡಲಿ ಎಂದು ಹೇಳಿದನು. ಈ ಮೆಷೀಬೋಶೆತನ ತಂದೆಯಾದ ಯೋನಾತನನು ದಾವೀದನ ಉತ್ತಮ ಸ್ನೇಹಿತನಾಗಿದ್ದನು.
11


ದಾವೀದನು ದೇವರಿಗೆ ವಿದೇಯನಾದಂತಲ್ಲಾ ದೇವರು ಆತನನ್ನು ಅಭಿವೃದ್ಧಿಗೆ ತಂದನು. ಒಂದು ದಿನ ಒಂದು ಭಯಂಕರ ಘಟನೆ ನಡೆಯಿತು. ಆತನು ಮನೆಯಲ್ಲಿ ಉಳಿದು ಸೈನಿಕರನ್ನು ಯುದ್ದಕ್ಕೆ ಕಳಿಸಿದನು. ಆತನಿಗೆ ರಾತ್ರಿಯಲ್ಲಿ ನಿದ್ದೆಯು ಬಾರದೆ ಮಾಳಿಗೆ ಮೇಲೆ ತಿರುಗಾಡುತ್ತಿದ್ದು ಪಟ್ಟಣವನ್ನು ನೋಡಿದನು.
12


ಆ ಸಮಯದಲ್ಲಿ ಸ್ನಾನ ಮಾಡುವಂತ ಒಬ್ಬ ಸ್ತ್ರೀಯನ್ನು ನೋಡಿದನು, ಅವಳ ಹೆಸರು ಬೆತ್ಸೇಬ. ಅವಳು ಊರಿಯನ ಹೆಂಡತಿಯಾಗಿದ್ದಳು ಅವಳ ಸಂಗಡ ಪಾಪವನ್ನು ಮಾಡಿದನು. ಆ ಊರಿಯನು ದಾವೀದನ ಸೈನಿಕರಲ್ಲಿ ಧೈರ್ಯಶಾಲಿಯಾದ ಸೈನಿಕನಾಗಿದ್ದನು.
13


ಮತ್ತು ಬೆತ್ಸೇಬೆಯು ಬಂದು ದಾವೀದನ ಹತ್ತಿರ ಹೇಳಿದ್ದೇನೆಂದರೆ ನಮಗೊಂದು ಮಗು ಹುಟ್ಟುವುದಕ್ಕಿದೆ ಅಂದಳು. ಆದರೆ ದಾವೀದನಿಗೆ ಆ ಒಂದು ಪಾಪದಿಂದ ಬಹಳ ತೊಂದರೆವುಂಟಾಗುವುದೆಂದು ತಿಳಿದಿತ್ತು.
14



ದಾವೀದನು ಪಾಪವನ್ನು ಅರಿಕೆ ಮಾಡುವುದನ್ನು ಬಿಟ್ಟು
ಪಾಪವನ್ನು ಮರೆಮಾಡುವುದಕ್ಕೆ ಪ್ರಯತ್ನಿಸುತ್ತಿದ್ದನು.
ಆದರೆ ಏನು ಪ್ರಯೋಜನವಾಗಲಿಲ್ಲ.

15



ಊರಿಯನನ್ನು
ಯುದ್ದರಂಗದಿಂದ ಮನೆಗೆ
ಕರೆದನು, ಅವನು ಮುಂದೆ ಹುಟ್ಟುವಂತ ಮಗು ಊರಿಯನದೆ
ಎಂದು ತಿಳಿದುಕೊಳ್ಳುವನು ಎಂದು ದಾವೀದನ ಆಲೋಚನೆಯಾಗಿತ್ತು.
ಆದರೆ ಊರಿಯನ ಜೊತೆಗಾರರು ಯುದ್ದದಲ್ಲಿರುವಾಗ ಮನೆಯಲ್ಲಿ
ಮಲಗಿಕೋಳ್ಳದೆ ರಾಜನ ಮನೆಯ ಬಾಗಲಿನಲ್ಲಿ ಮಲಗಿಕೊಂಡಿದ್ದನು.

16

ದಾವೀದನು ಇನ್ನು ಮಾಹಾ
ದುಷ್ಟಕಾರ್ಯವನ್ನು ಮಾಡಿದನು.
ದಾವೀದನು ಒಂದು ಪತ್ರವನ್ನು
ಊರಿಯನಿಗೆ ಕೊಟ್ಟು
ಯುದ್ದಕ್ಕೆ ಅವನನ್ನು
ತಿರುಗಿ ಕಳಿಸಿದನು.



17

ಪತ್ರದಲ್ಲಿ ಊರಿಯನನ್ನು
ಯುದ್ದದಲ್ಲಿ ಕೊಲ್ಲುವಂತೆ
ಮುಖ್ಯಧಿಪತಿಗೆ
ಆದೇಶಿಸಲಾಗಿತ್ತು.
ದಾವೀದನು
ಊರಿಯನನ್ನು ಕೊಲ್ಲಿಸಿ
ಅವನ ಹೆಂಡತಿಯನ್ನು
ತನ್ನ ಹೆಂಡತಿಯನ್ನಾಗಿ
ಮಾಡಿಕೊಂಡನು.



18



ದಾವೀದನು ಮಾಡಿದ ತಪ್ಪನ್ನು
ತೋರಿಸುವುದಕ್ಕೆ ದೇವರು ತನ್ನ
ಸೇವಕನಾದ ನಾತನನ್ನನ್ನು
ಕಳಿಸಿದನು. ನಾತನನು
ದಾವೀದನಿಗೆ ಶ್ರೀಮಂತ ಮತ್ತು
ಬಡವನ ಕಥೆಯನ್ನು ಹೇಳಲು
ಆರಂಭಿಸಿದನು, ಅದೇನೆಂದರೆ
ಆ ಶ್ರೀಮಂತನಿಗೆ ನೂರು
ಕುರಿಗಳಿದ್ದವು ಮತ್ತು ಆ
ಬಡವನಿಗೆ ಒಂದೇ ಒಂದು
ಕುರಿ ಇತ್ತು ಆತನು
ಅದನ್ನು ತನ್ನ ಮಗಳಂತೆ
ಸಾಕುತ್ತಿದ್ದನು.

19

ಒಬ್ಬ ಪ್ರಯಣಿಕನು ಆ ಶ್ರೀಮಂತ ಮನೆಗೆ ಬಂದಾಗ ಆತನು ತನಗಿದ್ದ ನೂರು
ಕುರಿಗಳಲ್ಲಿ ಒಂದನ್ನು ತಗೆದುಕೊಳ್ಳದೆ ಆ ಬಡವನ ಕುರಿಯನ್ನು ತಗೆದುಕೊಂಡು
ಕೊಂದನು.



20

ಆ ಶ್ರೀಮಂತನು ಸ್ವಾರ್ಥತೆಯ ಕಥೆಯನ್ನು ಕೇಳಿ ದಾವೀದನಿಗೆ ಸಿಟ್ಟು ಬಂದು ಹೀಗೆ ಅಂದನು, “ಆತನು ಸಾಯಲೇ ಬೇಕು”.



21

ನಾತನನು ಧೈರ್ಯವಾಗಿ ಆ ಮನುಷ್ಯನು ನೀನೇ ಅಂದನು. ಆ ಕಥೆಯಲ್ಲಿ ಬಂದಂತ ಆ ಶ್ರೀಮಂತನಿಗಿಂತ ದಾವೀದನು ಬಹಳ ಹೀನವಾದ ಕಾರ್ಯವನ್ನು ಮಾಡಿದ್ದನು.



22

ದಾವೀದನು ಎಷ್ಟು ದುಷ್ಟನೆಂದು ದೇವರು ತೋರಿಸಿದನು, ದಾವೀದನಿಗೆ ತನ್ನ ಪಾಪದ ಅರಿವಾಗಿ ಬಹಳವಾಗಿ ಗೋಳಾಡಿ ದೇವರಿಂದ ಕ್ಷಮೆಯನ್ನು ಯಾಚಿಸಿದನು. ದೇವರು ಆತನನ್ನು ಕ್ಷಮಿಸಿದನು, ಆದರೆ ಬೆತ್ಸೇಬೆಯಿಂದ ಹುಟ್ಟಿದ ಮಗು ಹುಟ್ಟುತ್ತಲೆ ಸತ್ತು ಹೋಯಿತು.



23

ದೇವರು ದಾವೀದನ ಘೋರವಾದ ಪಾಪವನ್ನು ಕ್ಷಮಿಸಿದನು ಮತ್ತು ಬೆತ್ಸೇಬೆಗೆ ಇನ್ನೊಂದು ಮಗು ಜನಿಸಿತು ಆತನ ಹೆಸರು ಸಲೋಮನನು, ಅವನು ದಾವೀದನ ನಂತರ ದೊಡ್ಡ ರಾಜನಾದನು, ಮತ್ತು ದಾವೀದನಿಗೆ ಇನ್ನೊ ಕೆಲವು ಮಕ್ಕಳಿದ್ದಾರೆ ಅವರಿಂದ ಆತನಿಗೆ ಬಹಳ ಕರಕರೆಯು ಉಂಟಾಯಿತು.



24

ಅರಸನಾದ ದಾವೀದನು (ಭಾಗ 2)

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**2 ಸಮುವೇಲು 1–12**

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
**ಕೀರ್ತನೆ 119:130**

ನಾವು ಕೆಟ್ಟದಾದ ಕಾರ್ಯಗಳನ್ನು ಮಾಡಿದ್ದೇವೆಂದು ದೇವರು ತಿಳಿದಿರುವನು. ಈ ಕೆಟ್ಟ ಕಾರ್ಯಗಳನ್ನು ಆತನು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ.

ದೇವರು ನಮ್ಮನ್ನು ತುಂಬಾ ಪ್ರೀತಿಸುವದರಿಂದ ತನ್ನ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ನಮ್ಮ ಪಾಪದ ಆ ಶಿಕ್ಷೆಯನ್ನು ಆತನು ತನ್ನ ಮೇಲೆ ಹೊತ್ತು ಕೊಂಡು ಶಿಲುಬೆಯ ಮೇಲೆ ಪ್ರಾಣಕೊಡುವಂತೆ ಮಾಡಿದನು. ಆತನು ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿದ್ದಾನೆ. ಯೇಸುಕ್ರಿಸ್ತನ ಮೂಲಕ ದೇವರು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ.

ನೀನು ನಿನ್ನ ಪಾಪಗಳಿಂದ ದೇವರ ಕಡೆಗೆ ತಿರುಗುವದಾದರೆ ಆತನಿಗೆ ಹೀಗೆ ಹೇಳು; ಪ್ರೀತಿಯುಳ್ಳ ದೇವರೇ, ಯೇಸುಕ್ರಿಸ್ತನು ನನ್ನ ಪಾಪಕ್ಕಾಗಿ ಸತ್ತು, ತಿರುಗಿ ಎದ್ದು ಬಂದು ಜೀವಿಸುತ್ತಿದ್ದಾನೆ ಎಂದು ನಂಬುತ್ತೇನೆ. ನೀನು ನನ್ನ ಹೃದಯದೊಳಗೆ ಬಂದು ನನ್ನ ಪಾಪಗಳನ್ನು ಕ್ಷಮಿಸು. ಈ ಮೂಲಕ ನಾನು ಹೊಸ ಜೀವಿತವನ್ನು ಪಡೆದುಕೊಂಡು ನಿನ್ನೊಂದಿಗೆ ಸದಾ ಜೀವಿಸುವೆನು. ನಿನ್ನ ಮಗನಾಗಿ ನಿನಗಾಗಿ ಜೀವಿಸಲು ನನಗೆ ಸಹಾಯ ಮಾಡು. ಆಮೆನ್. ಯೋಹಾನ **3:16**

ನೀನು ಪ್ರತಿ ದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು.